ವಿಶೇಷ ಗುಣದಿಂದಲೇ ಎಲ್ಲಾ ಗೆಳತಿಯರಿಗಿಂತ ಹೆಚ್ಚು ನಿನ್ನನ್ನು ಇಷ್ಟಪಡುತ್ತ ಬಂದಿದ್ದೆ. ಆದರೆ ಬೆಳಗ್ಗೆ ನನ್ನ ಗೆಳತಿ ಅಂದರೆ ನಿನ್ನ ನಾದಿನಿ, ಕಾಲ್ ಮಾಡಿ ಹೇಳಿದ ಸುದ್ದಿಯಿಂದ ನಿಜಕ್ಕೂ ಶಾಕ್ ಆಯಿತು. ನೀವು ಕಲಾವಿದರು ಬಹಳ ಸ್ವಾರ್ಥಿಗಳು ಅಂತ ಕೇಳ್ಪಟ್ಟಿದ್ದೆ ಆದರೆ ಅದರೊಂದಿಗೆ ಅಹಂಕಾರಿಗಳು, ಅತಿಥಿಗಳಿಗೆ ಅನಾದರ ತೋರುವವರು ಅಂತ ಗೊತ್ತಿರಲಿಲ್ಲ.' ಇನ್ನೂ ಏನೇನೋ ಮಾತನಾಡುತ್ತಲೇ ಇದ್ದಳು. ಹರಿದ್ವರ್ಣಾ ಕಾಲ್ ಕಟ್ ಮಾಡಿದವಳೇ, ತನ್ನೆರಡೂ ಕೈಗಳನ್ನು ಗುಣಾಕಾರ ಚಿಹ್ನೆಯಲ್ಲಿ ಭುಜಕ್ಕೆ ಹಿಡಿದುಕೊಂಡು ಕೂತಲ್ಲೇ ಕುಳಿತುಬಿಟ್ಟಳು.

ಯಾರೋ ಬಾಗಿಲಿನ ಬೆಲ್ ಒತ್ತಿದರು. ಎದ್ದು ಕಿಂಡಿಯೊಳಗೆ ಇಣುಕಿದಳು. ಸದಾ ಒಂದಿಲ್ಲೊಂದು ತಿಂಡಿ ತಿನಿಸು ಹಿಡಿದುಕೊಂಡು ಮೆಲ್ಲಗೆ ಬಾಗಿಲು ತಟ್ಟಿ, 'ಹರೀ' ಎಂದು ಪ್ರೀತಿಯಿಂದ ಕೂಗುವ ಓನರ್ ಆಂಟಿ ಒಂದೇ ಸಮ ಬೆಲ್ ಮಾಡುತ್ತಿದ್ದರು. ಪಾಪ ಏನೋ ತೊಂದರೆಯಲ್ಲಿದ್ದಾರೆಂದು ಬಾಗಿಲು ತೆರೆದಳು. 'ನೋಡಮ್ಮಾ, ನಮ್ಮನೇಲಿ ಬಾಳಿಬದುಕಬೇಕಾದ ಮಕ್ಕಳು ಮೊಮ್ಮಕ್ಕಳು ಇವೆ. ಹೀಗೆ ಯಾರ್ಯಾರೋ ಬಂದು ನಮ್ಮ ಮನೆಗೆ ಕೆಟ್ಟಕೆಟ್ಟ ಶಾಪ ಹಾಕಿಹೋದರೆ ನಮಗೆ ನಿದ್ದೆಯಾದರೂ ಬರುವುದು ಹೇಗೆ? ನೀನು, ನಿನ್ನ ಗಂಡನ ಬಗ್ಗೆ ಎರಡು ಮಾತಿಲ್ಲ ನಮಗೆ. ಆದರೆ, ನಿನ್ನೆ ಬಂದ ನಿಮ್ಮ ಸಂಬಂಧಿಕರೊಬ್ಬರಲ್ಲಿ ಒಬ್ಬಾಕೆ, ಗೇಟಿನ ಮುಂದೆ ನಿಂತು ನಮ್ಮ ಇಡೀ ಬಿಲ್ಡಿಂಗ್ ಅನ್ನು ನೋಡುತ್ತ, ಭಯಂಕರ ಶಾಪಗಳನ್ನು ಹಾಕುತ್ತ, ಚಟಚಟನೆ ಬೆರಳುಗಳನ್ನು ಮುರಿಯುತ್ತಿದ್ದುದನ್ನು ನೋಡಿದ ನನಗೆ ರಾತ್ರಿಯೆಲ್ಲಾ ನಿದ್ದೆಯೇ ಇಲ್ಲವಮ್ಮ. ಯಾಕೆ ಅಂಥದ್ದೇನಾಯಿತು? ಈಗಲೇ ಬೇಡ, ಮತ್ತೊಮ್ಮೆ ಯಾವಾಗಾದರೂ ಮಾತನಾಡೋಣ ಒಲೆ ಮೇಲೆ ಹಾಲಿಟ್ಟುಬಂದಿದ್ದೀನಿ.' ಉಸಿರೆಳೆದುಕೊಂಡು ಬಾಗಿಲು ಹಾಕಿಕೊಂಡಳು. ಕನ್ನಡಿ ಮುಂದೆ ನಿಂತು ಎರಡೂ ಕೈಗಳನ್ನು ಮೇಲೆತ್ತಿ ಸುಮಾರು ಒಂದು ನಿಮಿಷದ ತನಕ ಶರಣಾಗತಿ ಭಂಗಿಯಲ್ಲಿ ನಿಂತಳು.

ತಲೆ ಮೊಸರು ಗಡಿಗೆಯಾಗಿತ್ತು. ಏನು ಮಾಡುವುದು? ಏನೇ ಆದರೂ ನಮ್ಮ ದೇವರೇ ನಮಗೆ ಗತಿ ಎಂದುಕೊಳ್ಳುತ್ತ ಕ್ಯಾನ್ವಾಸಿನ ಮುಂದೆ ಕುಳಿತು ಐದೇ ನಿಮಿಷದಲ್ಲಿ ಚಿತ್ರ ಬಿಡಿಸಿ, 'ಇನ್ನೂ ಸಮಯವಿದ್ದರೆ ಈ ಚಿತ್ರವನ್ನು ಬಳಸಿಕೊಳ್ಳಬಹುದು.' ಸಂಪಾದಕರಿಗೆ ಮೆಸೇಜ್ ಹಾಕಿದಳು. ಆ ಕಡೆಯಿಂದ ಎಷ್ಟೊತ್ತಾದರೂ ಉತ್ತರ ಬರಲಿಲ್ಲ. ಹೋದರೆ ಹೋಗಲಿ ಎಂದು ಭುಜಕ್ಕೆ ಸ್ಪ್ರೇ ಮಾಡಿಕೊಂಡು ಮತ್ತೆ ಮಲಗಿದಳು.

ಎಲ್ಲ ಪುಟಗಳನ್ನು ಪಿಡಿಎಫ್ ಮಾಡಿ ಪ್ರಿಂಟ್‌ಗೆ ಕಳುಹಿಸಿದ ಮೇಲೂ ಮತ್ತೇನಿದು ಸಂಪಾದಕರ ಕಿರಿಕಿರಿ ಎಂದುಕೊಂಡು ಡಿಸೈನರ್ ಫೋನ್ ಎತ್ತಿದ. ಸಂಪಾದಕರು ಹರಿದ್ವರ್ಣಾಳ ಲೇಟೆಸ್ಟ್ ಇಲ್ಲಸ್ಟ್ರೇಷನ್ ಅಪ್‌ಡೇಟ್ ಮಾಡಬೇಕೆಂದರು. ಇಮೇಜ್ ಡೌನಲೋಡ್ ಮಾಡಿಕೊಂಡ. ನೀಲಿಬಣ್ಣದಲ್ಲಿ ಬರೆದ ಎರಡು ದೊಡ್ಡದೊಡ್ಡ ಸೊನ್ನೆಗಳು ಮತ್ತವುಗಳನ್ನು ಕೂಡಿಸಿ ಹಿಡಿದಿಡಲು ಮಧ್ಯದಲ್ಲಿ ಅರಳಿಸಿದ ಒಂದು ಪುಟ್ಟ ಗುಲಾಬಿ ಹೂ. ಆ ಸೊನ್ನೆಗಳನ್ನು ಬಳಸಿದ ಎರಡು ಲೇಸ್‌ಗಳು ಹಿಂದಿದ್ದ ಹಸಿರು ಮರಕ್ಕೆ ಕಟ್ಟಲ್ಪಟ್ಟಿದ್ದವು. ಕತ್ತು ವಾಲಿಸಿ ನೋಡೇ ನೋಡಿದ ಡಿಸೈನರ್. ಒಂದು ಆ್ಯಂಗಲ್‌ನಿಂದ ಚಷ್ಮಾದಂತೆಯೂ ಇನ್ನೊಂದು ಆ್ಯಂಗಲ್‌ನಿಂದ ಜೋಡಿಸಿಟ್ಟ ಹಣ್ಣುಗಳಂತೆಯೂ ಕಾಣುತ್ತಿದ್ದವು. ಮುಖಪುಟದ ಲೇಖನಕ್ಕೂ ಈ ಇಲ್ಲಸ್ಟ್ರೇಷನ್‌ಗೂ ಹೇಗೆ ಹೊಂದಿಕೆಯಾಗುತ್ತದೆ? ತಲೆಕೆರೆದುಕೊಳ್ಳದೆ, ಅಭ್ಯಾಸಬಲದಂತೆ ತನ್ನ ಕೆಲಸ ಮುಗಿಸಿ, ಹೊಸ ಪಿಡಿಎಫ್ ಮಾಡಿ ಸಂಪಾದಕರಿಗೆ ಮೇಲ್ ಮಾಡಿದ. ಮತ್ತೆ ಸಂಪಾದಕರ ಫೋನ್,' ಈಗಷ್ಟೇ ಒಂದು ಪ್ಯಾರಾ ಬರೆದು ಮೇಲ್ ಮಾಡಿದ್ದೇನೆ. ಪ್ರೀವಿಯಸ್ ಪೇಜಿಗೆ ಮಾಡಿದ ಡಿಸೈನ್ ಲೇಔಟ್ ಹಾಗೇ ಇರಲಿ, ಅದನ್ನು ಕೆಳಗಿನ ಅರ್ಧಪುಟಕ್ಕೆ ಶಿಫ್ಟ್ ಮಾಡಿ. ಸೆಕೆಂಡ್ ಲೀಡ್ ಮುಂದಿನವಾರ ಬಳಸಿಕೊಳ್ಳಿ. ಮೊದಲ ಲೀಡ್‌ನ ಜಾಗದಲ್ಲಿ ಹರಿದ್ವರ್ಣಾ ಕಳಿಸಿರುವ ಇಲ್ಲಸ್ಟ್ರೇಷನ್ ಹಾಕಿ, ಅದರ ಪಕ್ಕದಲ್ಲಿ ನಾನೀಗ ಕಳಿಸಿರುವ